ಆ) ಹಾಗಿದ್ದರೆ ಯಾವಾಗ ತೆಗೆದುಕೊಳ್ಳಲಾಗುವುದು ;
ಇ) ಈ ಯೋಜನೆಯನ್ನು (1983) ಈ ವರ್ಷವೇ ಕಾರ್ಯಗತಗೊಳಿಸಲಾಗುವುದೇ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

ಅ) ಇಲ್ಲ
ಆ) ಉದ್ಭವಿಸುವುದಿಲ್ಲ
ಇ) ಉದ್ಭವಿಸುವುದಿಲ್ಲ

ಬೆಂಗಳೂರಿನಲ್ಲಿ ಗೃಹವ್ಯೂಹ ಕೇಂದ್ರದ ಸ್ಥಾಪನೆ

ಪ್ರ. 106 (51) ಶ್ರೀ ಗೋವಿಂದ ಪಿ. ಒಡೆಯರಾಜ್ (ಕಮಲಾಪುರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

ಅ) ಬೆಂಗಳೂರಿನಲ್ಲಿ ಸೌರವ್ಯೂಹಕ್ಕೆ ಯಾವಾಗ ತಳಹದಿಯನ್ನು ಹಾಕಿದರು :
ಆ) ಇಲ್ಲಿಯವರೆಗೆ ಆಗಿರುವ ಪ್ರಗತಿ ;
ಇ) ಈ ಕೆಲಸವನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿತ್ತು ;
ಈ) ಈ ಕಾರ್ಯವನ್ನು ಯಾವಾಗ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) 31-1-1982 ರಂದು
ಆ) ಸೌರವ್ಯೂಹಕ್ಕೆ ಬೇಕಾಗುವ ಸಲಕರಣೆಗಳನ್ನು ಕೊಳ್ಳಲು ಸುಮಾರು 52 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ,
ಇ) ಸುಮಾರು 15 ತಿಂಗಳೊಳಗೆ
ಈ) ಶೀಘ್ರದಲ್ಲಿ

ಶ್ರೀ ಗೋವಿಂದ ಪಿ. ಒಡೆಯರಾಜ್.—ಪ್ಲಾನಿಟೇರಿಯಂನ ಮಹತ್ವ ಎಷ್ಟು ಎಂಬುದು ಮಂತ್ರಿಗಳಿಗೂ ಹಾಗೂ ಸರ್ಕಾರಕ್ಕೆ ಅರಿವಾದಂತೆ ಕಾಣುವುದಿಲ್ಲ. ಈ ಪ್ರಾಜೆಕ್ಟ್‌ನ ಪೂರ್ಣ ವೆಚ್ಚ ಎಷ್ಟು ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಚಂದ್ರಶೇಖರ್.—ಅದು 87,5 ಲಕ್ಷ ರೂಪಾಯಿಗಳು.

ಶ್ರೀ ಗೋವಿಂದ ಪಿ. ಒಡೆಯರಾಜ್.—ಹಾಗಾದರೆ ಈಗಾಗಲೇ ಈ ಪ್ರಾಜೆಕ್ಟ್‌ನ ಮೇಲೆ 52 ಲಕ್ಷ ರೂಪಾಯಿಗಳನ್ನು ಮಾತ್ರ ಸಲಕರಣೆಗಳ ಮೇಲೆ ಖರ್ಚು ಮಾಡಿದ್ದೇವೆ ಅಂತ ಹೇಳಿದ್ದಾರೆ. ಅದಕ್ಕೆ ಬೇಕಾದಂತಹ ಬಿಲ್ಡಿಂಗನ್ನೂ ಇದುವರೆಗೆ ಏಕೆ ಕಟ್ಟಲಿಲ್ಲ ? ಕಟ್ಟಡವನ್ನು ಕಟ್ಟಬೇಕಾದ್ದು ಒಂದು. ನಂತರ 15 ತಿಂಗಳಲ್ಲಿ ಈ ಪ್ರಾಜೆಕ್ಟ್‌ನ್ನು ಮುಗಿಸಬೇಕೆಂದು ನಿಗದಿ ಮಾಡಲಾಗಿದ್ದರೂ ಈಗಾಗಲೇ 15 ತಿಂಗಳು ಮುಗಿದು ಹೋಗಿದೆ, ಕಟ್ಟಡವನ್ನು ಕಟ್ಟುವುದಕ್ಕಾಗಿ ಟೆಂಡರ್‌ನ್ನು ಕರೆದಿದ್ದೀರಾ ? ಕಟ್ಟಡವನ್ನು ಮುಗಿಸುವುದಕ್ಕೆ ಬಹಳ ಜಾಗ್ರತೆಯಾಗಿ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ, ಚಂದ್ರಶೇಖರ್.—ಮೊದಲು ನಿಗದಿ ಮಾಡಿದ್ದಂತಹ ನಿವೇಶನ ಸ್ಯಾಂಕಿ ಟ್ಯಾಂಕಿನ ಮೇಲೆ ತೀರ್ಮಾನ ಮಾಡಿತ್ತು. ಅದರ ಸ್ಥಳವನ್ನು ನಾವು ಬದಲಾವಣೆ ಮಾಡಿದ್ದೇವೆ. ಈಗ ನಿಗದಿ ಮಾಡಿರುವಂತಹ ಸ್ಥಳ ಏರೋನಾಟಿಕಲ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್‌ನ ಜಮೀನು ಇದೆ. ನಮ್ಮ ಶಾಸಕರ ಭವನದ ಹತ್ತಿರ ಆ ಸ್ಥಳವನ್ನು ನಿಗದಿ ಮಾಡಿದ್ದೇವೆ. ಪ್ಲಾನಿಟೇರಿಯನ ಜಾಗ ಕೇಂದ್ರ ಸ್ಥಳದಲ್ಲಿರಬೇಕೆಂದು ಅನೇಕ ಮನವಿಗಳು ಬಂದಿದ್ದರ ಪ್ರಯುಕ್ತ ಇದು ಒಂದು ಕೇಂದ್ರ ಸ್ಥಳದಲ್ಲಿರಬೇಕೆಂದು ಸರ್ಕಾರ ಕೂಡ ತೀರ್ಮಾನ ಮಾಡಿ ಈ ಸ್ಥಳವನ್ನು ನಿಗದಿ ಮಾಡಿದ್ದೇವೆ, ಆ ಜಾಗ ಸುಮಾರು 2.5 ಎಕರೆಗಳು ಇದೆ, ಅದು ಪಿ, ಡಬ್ಲ್ಯು, ಡಿ. ಯಿಂದ ಕಾರ್ಪೋರೇಷನ್‌ಗೆ ವರ್ಗಾವಣೆ ಯಾಗಿದೆ. ಪ್ರಾಜೆಕ್ಟ್‌ನ್ನು ಪ್ರಾರಂಭ ಮಾಡಿದನಂತರ ಅದು 15 ತಿಂಗಳೊಳಗೆ ಮುಗಿಯಬೇಕೆಂದಿದೆ. ಅಷ್ಟರೊಳಗೆ ಆ ಕೆಲಸ ಪೂರ್ಣವಾಗುತ್ತದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ಥಳವನ್ನು ಬದಲಾವಣೆ ಮಾಡುವುದಕ್ಕೆ ಕಾರಣ ಶ್ರೀಮಂತ ವರ್ಗದ ಜನ ಏನು ಆ ಭಾಗದಲ್ಲಿದ್ದಾರೆ, ಅವರ ಒಂದು ಒತ್ತಡದಿಂದ ಈ ಸ್ಥಳವನ್ನು ಬದಲಾವಣೆ ಮಾಡಿದ್ದೀರಿ ಎಂಬುದಾಗಿ ತಿಳಿದುಕೊಳ್ಳಬಹುದೇ ?

ಶ್ರೀ ಎಂ. ಚಂದ್ರಶೇಖರ್.—ಶ್ರೀಮಂತ ವರ್ಗದವರಿಂದ ಒತ್ತಡ ಬಂದು ಆ ಸ್ಥಳವನ್ನು ಬದಲಾವಣೆ ಮಾಡಿದ್ದಲ್ಲ. ಅದು ಸಹ ರೆಸಿಡೆನ್ಸಿಯಲ್ ಏರಿಯಾವಾಗಿರುವುದರಿಂದ, ಹಾಗೂ ಅದು ನಗರದ ಒಂದು ಮೂಲೆಯಲ್ಲಿ ಮಾಡಿದಂತಾಗುತ್ತದೆ ಎಂಬ ಒತ್ತಡ ಬಂದಿದೆ. ಇದರ ಜೊತೆಗೆ ಈ ಒಂದು ಪ್ರಾಜೆಕ್ಟ್‌ನ್ನು ಬೆಂಗಳೂರು ನಗರದ ಮಧ್ಯ ಭಾಗದಲ್ಲಿ ಮಾಡಿದ್ದೇ ಆದರೆ ಇದರಿಂದ ಎಲ್ಲ ಜನಗಳಿಗೂ ಉಪಯೋಗವಾಗುತ್ತದೆಂದು ತಿಳಿದುಕೊಂಡು ಈ ಎರಡೂ ಕಾರಣಗಳಿಂದಾಗಿ ಈ ಒಂದು ಸ್ಥಳವನ್ನು ನಿಗದಿ ಮಾಡಿದ್ದೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಈ ಪ್ಲಾನಿಟೇರಿಯಂನ್ನು ಕಟ್ಟುವುದಕ್ಕಾಗಿ 2.5 ಎಕರೆ

ಜಮೀನನ್ನೂ ತೆಗೆದುಕೊಂಡಿದ್ದೀರಿ ಎಂಬುದಾಗಿ ಹೇಳಿದ್ದೀರಿ. ಯಾವಾಗ ಖಚಿತವಾಗಿ ಇದನ್ನು ಪ್ರಾರಂಭ ಮಾಡುತ್ತೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಇದಕ್ಕೆ ಬೇಕಾದಂತಹ ಡಿಸೈನ್, ಹಾಗೂ ಆರ್ಕಿಟೆಕ್ಟ್ ಎಲ್ಲ ಸೇರಿ 87.5 ಲಕ್ಷ ರೂಪಾಯಿಗಳು. ಟೆಂಡರ್‌ನ್ನು ಈಗ ಕರೆಯುವಂತಹ ವ್ಯವಸ್ಥೆಯಾಗಿದೆ. ಇನ್ನು ಎರಡು ತಿಂಗಳೊಳಗೆ ಈ ಕೆಲಸ ಪ್ರಾರಂಭವಾಗಬಹುದು.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಈಗ ತಾವೇನು ಪ್ಲಾನಿಟೇರಿಯನ್ನು ಕಟ್ಟುತ್ತಿದ್ದೀರಿ ಇದು ಎಲ್ಲ ಕಡೆ ಈಗಾಗಲೇ ಇರುವಂತಹ ರೀತಿಯಲ್ಲೇ ಇರುತ್ತದೆಯೇ ? ಅಲ್ಲಿ ಇರುವಂತಹ ವ್ಯವಸ್ಥೆ ಇಲ್ಲಿಯೂ ಇರುತ್ತದೆಯೇ ? ಅಥವಾ ಬೇರೆ ರೀತಿಯಲ್ಲಿರುತ್ತದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸುತ್ತಾರೆಯೇ ?

ಶ್ರೀ ಎಂ. ಚಂದ್ರಶೇಖರ್.—ಎಲ್ಲ ಒಂದೇ ತರಹ ಇರುತ್ತದೆ. ಬಾಂಬೆಯಲ್ಲಿರತಕ್ಕಂತಹ ನೆಹರೂ ಪ್ಲಾನಿಟೇರಿಯಂನ ಆರ್ಕಿಟೆಕ್ಟ್ ಏನಿದೆ, ಅದಕ್ಕೆ ಒಪ್ಪಿಗೆಯನ್ನು ತೆಗೆದುಕೊಂಡಿದ್ದೇವೆ. ಅದೇ ಪ್ರಕಾರ ಇಲ್ಲಿಯೂ ಮಾಡುತ್ತಿದ್ದೇವೆ. ನಗರದಲ್ಲಿ ಒಂದು ಉತ್ತಮವಾದ ಪ್ಲಾನಿಟೇರಿಯಂ ಬರುತ್ತದೆ.

ವಿಷಯ : ನೇಮಕಾತಿ ಸಮಿತಿಗಳನ್ನು ರಚಿಸುವ ಕುರಿತು

ಪ್ರಶ್ನೆ 107 (34) ಶ್ರೀ ಎಸ್. ಎಸ್. ಪಾಟೀಲ್ (ಬಿಳಗಿ).—ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ, ಉತ್ತರಿಸುವರೇ :—

ಎ) ಎಷ್ಟು ನೇಮಕಾತಿ ಸಮಿತಿಗಳನ್ನು ರಚಿಸಲಾಗಿದೆ;

ಬಿ) ವಿವಿಧ ನೇಮಕಾತಿ ಸಮಿತಿಗಳ ಸದಸ್ಯರು ಯಾರು (ಖಾಸಗಿ ಸದಸ್ಯರ ವರ್ಗ, ಹಿಂದುಳಿದ ಜಾತಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು ಇತ್ಯಾದಿಗಳನ್ನು ಸೂಚಿಸತಕ್ಕದ್ದು);

ಸಿ) ನೇಮಕಾತಿ ಸಮಿತಿಗಳಿಗೆ ಅಂತಹ ಸದಸ್ಯರುಗಳನ್ನು ಆರಿಸುವಾಗ ಅವಲಂಬಿಸಿದ ಅಳತೆಗೋಲು;

ಡಿ) ಯಾರ ಶಿಫಾರಿಸಿನ ಮೇಲೆ ಈ ನೇಮಕಾತಿ ಸಮಿತಿಗಳ ಸದಸ್ಯರುಗಳನ್ನು ಆರಿಸಲಾಗಿದೆ ?

ಶ್ರೀ ರಾಮಕೃಷ್ಣ ಹೆಗಡೆ, (ಮುಖ್ಯಮಂತ್ರಿಗಳು) :—

ಎ) 75.

ಬಿ) ಈ ಸಮಿತಿಗಳನ್ನು ರಚಿಸುವ ಬಗ್ಗೆ ಹೊರಡಿಸಿದ ಆದೇಶಗಳ ಪ್ರತಿಯನ್ನು ಸಭೆಯ ಮುಂದೆ ಇಡಲಾಗಿದೆ. ಈ ಆದೇಶಗಳಲ್ಲಿ ಸರ್ಕಾರಿ ಸದಸ್ಯರುಗಳ ಹುದ್ದೆಗಳನ್ನು ಮತ್ತು ಖಾಸಗಿ ಸದಸ್ಯರುಗಳ ಹೆಸರುಗಳು ಸೂಚಿಸಲಾಗಿದೆ. ಅವರ ಜಾತಿಗೆ ಸಂಬಂಧಪಟ್ಟ ಮಾಹಿತಿಯನ್ನು ಸಂಗ್ರಹಿಸಿ ಸದ್ಯದಲ್ಲಿ ಒದಗಿಲಾಗುವುದು.

ಸಿ) ಸಂಬಂಧಪಟ್ಟ ನಿಯಮ ಆದೇಶಗಳಲ್ಲಿ ನಿಗದಿಪಡಿಸಿದ ಅಳತೆಗೋಲನ್ನು ಅವಲಂಬಿಸಲಾಗಿದೆ.

ಡಿ) ಸರ್ಕಾರವು ಸಂಬಂಧಪಟ್ಟ ನಿಯಮ ಆದೇಶಗಳನ್ನು ಗಮನದಲ್ಲಿಟ್ಟು ಸದಸ್ಯರುಗಳನ್ನು ಆರಿಸಿರುವುದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇದರಲ್ಲಿ ಪೂರ್ಣ ಉತ್ತರ ನಮಗೆ ಸಿಕ್ಕಿಲ್ಲ. ಇಲಾಖೆಯಲ್ಲಿ ನೇಮಕ ಮಾಡಿರತಕ್ಕಂತಹ ನೇಮಕಾತಿ ಸಮಿತಿಗಳಲ್ಲಿರತಕ್ಕಂತಹ ಸದಸ್ಯರ ಜಾತಿ ಅಂದರೆ ಬಿ.ಸಿ.ಎಸ್.ಸಿ. ಎಸ್.ಟಿ. ಇವುಗಳನ್ನು ತಿಳಿಸಿ ಎಂಬ ಪ್ರಶ್ನೆಗೆ ಇದನ್ನು ಸಂಗ್ರಹ ಮಾಡಿ ಆದಷ್ಟು ಜಾಗ್ರತೆ ತಿಳಿಸಲಾಗುವುದು ಎಂಬುದಾಗಿ ತಿಳಿಸಿದ್ದಾರೆ. ಹಾಗಾದರೆ ನಾವು ಪ್ರಶ್ನೆಯನ್ನು ಕೇಳುವಂತಹ ಮೂಲ ಉದ್ದೇಶವಾದರೂ ಏನು ?

ಉಪಾಧ್ಯಕ್ಷರು.—ಉತ್ತರ ಬಹಳ ಉದ್ದವಾಗಿರುವುದರಿಂದ, ಸಭೆಯ ಮುಂದೆ ಇಡಲಾಗಿದೆ. ಬೇಕಾದರೆ ತಾವು ಬಂದು ನೋಡಿಕೊಳ್ಳಬಹುದು, ಮಾನ್ಯ ಮುಖ್ಯ ಮಂತ್ರಿಗಳು ಈಗ ಅದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಉತ್ತರ ಏನು ಕೊಟ್ಟಿದ್ದಾರೆ, ಅದರಲ್ಲಿ ನಂತರ ಒದಗಿಸಿಕೊಡಲಾಗುವುದು ಎಂಬುದಾಗಿ ಹೇಳಿದ್ದಾರೆ ಅವರು ಇದರ ಬಗ್ಗೆ ವಿವರಗಳನ್ನುಕ ಲೆಕ್ಟ್ ಮಾಡಲಿ, ಬೇಡ ಅನ್ನುವುದಿಲ್ಲ. It will takee its own time, I know that. Then you holdover the question and we can take it up afterwards. ಇಲ್ಲಿ ಟೇಬಲ್ ಮುಂದೆ ಒದಗಿಸಿಕೊಡುತ್ತೇವೆಂದು ಹೇಳಿದ್ದರೂ ಕೂಡ ಇದುವರೆಗೂ ಒದಗಿಸಿಲ್ಲಾ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈಗಿನ ಪದ್ಧತಿ ಪ್ರಕಾರ ಇಂಥಾ ದಿವಸ ಇಂಥವರು ಇಂಥಾ ಪ್ರಶ್ನೆಗೆ ಉತ್ತರ ಕೊಡಬೇಕು ಎನ್ನುವ ನಿರ್ಬಂಧ ಇದೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಸಂಬಂಧಪಟ್ಟದ್ದಾಗಿರುತ್ತದೆ. ಅದು ಕಮಿಟಿಗಳಿಗೆ